## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2016–17 ನೇ ಸಾಲಿನ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ಜವಳಿ ಸಂಸ್ಕರಣ ಘಟಕ (ಟೆಕ್ಸ್‌ಟೈಲ್ ಪ್ರೋಸೆಸ್ಸಿಂಗ್ ಘಟಕ) ಸ್ಥಾಪಿಸುವ ಯೋಜನೆ ಹಾಗೂ ಮಾರ್ಗಸೂಚಿಯನ್ನು ಅನುಮೋದಿಸುವ ಬಗ್ಗೆ.

ಉಲ್ಲೇಖ: 1. ಜವಳಿ ಅಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ: ಕೈಜಇ/ಜವಳಿ/ಜಪ್ರಅ/ಪ್ರೋಸೆಸ್ಸಿಂಗ್ ಘಟಕ/ 2016–17 ದಿನಾಂಕ: 20.12.2016.

*********

**ಪ್ರಸ್ತಾವನೆ:**

ಓದಲಾದ (1)ರ ಜವಳಿ ಅಭಿವೃದ್ಧಿ ಆಯುಕ್ತರ ಪತ್ರದಲ್ಲಿ 2016–17 ನೇ ಸಾಲಿನ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ಜವಳಿ ಸಂಸ್ಕರಣ ಘಟಕ (ಟೆಕ್ಸ್‌ಟೈಲ್ ಪ್ರೋಸೆಸ್ಸಿಂಗ್ ಘಟಕ) ಸ್ಥಾಪನೆಗೆ ಸರ್ಕಾರದಿಂದ ಶೇ. 50 ರಷ್ಟು ಸಹಾಯಧನ ನೀಡುವ ಯೋಜನೆಗೆ ಹಾಗೂ ಯೋಜನೆಯ ಮಾರ್ಗಸೂಚಿಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಜವಳಿ ಸಂಸ್ಕರಣ ಘಟಕ (ಪ್ರೋಸೆಸ್ಸಿಂಗ್ ಘಟಕ) ವನ್ನು ಸ್ಥಾಪನೆ ಮಾಡುವುದರಿಂದ ರಾಜ್ಯದಲ್ಲಿ ಉತ್ಪಾದನೆಯಾಗುವ ಬಟ್ಟೆಗಳನ್ನು ಸ್ಥಳೀಯವಾಗಿ ಕಡಿಮೆ ವೆಚ್ಚದಲ್ಲಿ ಸಂಸ್ಕರಣೆ ಮಾಡಬಹುದಾಗಿದೆ. ಪ್ರಸ್ತುತ ರಾಜ್ಯದಲ್ಲಿ ಯಾವುದೇ ಸಂಸ್ಕರಣಾ ಘಟಕಗಳು ಇಲ್ಲದೇ ಇರುವುದರಿಂದ, ನೇಕಾರರು/ ಜವಳಿ ಉದ್ದಿಮೆದಾರರು ಉತ್ಪಾದಿಸುವ ಬಟ್ಟೆಯನ್ನು ಸಂಸ್ಕರಣೆ ಮಾಡಲು ಹೊರ ರಾಜ್ಯಗಳಲ್ಲಿರುವ ಸಂಸ್ಕರಣ ಘಟಕಗಳನ್ನು ಅವಲಂಬಿಸಬೇಕಾಗಿದೆ. ಇದರಿಂದ ರಾಜ್ಯದ ಜವಳಿ ಉದ್ದಿಮೆದಾರರು ತಮ್ಮ ಉತ್ಪನ್ನಗಳ ಸಂಸ್ಕರಣೆಗಾಗಿ ಹೆಚ್ಚಿನ ಸಾರಿಗೆ ವೆಚ್ಚವನ್ನು ಹಾಗೂ ಸಮಯವನ್ನು ಭರಿಸಬೇಕಾಗಿರುತ್ತದೆ. ರಾಜ್ಯದಲ್ಲಿ ಸಂಸ್ಕರಣ ಘಟಕವನ್ನು ಸ್ಥಾಪಿಸುವುದರಿಂದ ಉತ್ಪಾದನಾ ವೆಚ್ಚ ಕಡಿಮೆಯಾಗಿ ಸಿದ್ಧ ವಸ್ತುಗಳನ್ನು ಗ್ರಾಹಕರಿಗೆ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಲು ಸಾಧ್ಯವಾಗುತ್ತದೆ. ಸಂಸ್ಕರಣ ಘಟಕವನ್ನು ಸ್ಥಾಪಿಸುವುದರಿಂದ ಇದಕ್ಕೆ ಪೂರಕವಾದ ಉದ್ದಿಮೆಗಳು ಮತ್ತು ಹೆಚ್ಚಿನ ಬಟ್ಟೆ ಉತ್ಪಾದನೆಯ ಘಟಕಗಳನ್ನು ರಾಜ್ಯದಲ್ಲಿ ಸ್ಥಾಪಿಸಲು ಉದ್ದಿಮೆದಾರರು ಬಂಡವಾಳ ಹೂಡಿಕೆ ಮಾಡಲು ಮುಂದೆ ಬರುತ್ತಾರೆ. ಈ ಘಟಕ ಸ್ಥಾಪಿಸಲು ಸರ್ಕಾರದಿಂದ ಸಹಾಯಧನ ನೀಡಿದ್ದಲ್ಲಿ ಜವಳಿ ಉದ್ದಿಮೆದಾರರನ್ನು ಹಾಗೂ ನೇಕಾರರನ್ನು ಪ್ರೋತ್ಸಾಹಿಸಿದಂತೆ ಆಗುವುದಲ್ಲದೇ ಸ್ಥಳೀಯ ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿಕೊಟ್ಟಂತಾಗುತ್ತದೆ.

ಈ ಹಿನ್ನೆಲೆಯಲ್ಲಿ ಜವಳಿ ಅಭಿವೃದ್ಧಿ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ವಾಕೈ 86 ಜಕೈಯೋ 2016 ಬೆಂಗಳೂರು, ದಿನಾಂಕ: 28.01.2017**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕೈಮಗ್ಗ ಮತ್ತು ಜವಳಿ

..2

ಇಲಾಖೆಯ 2016-17 ನೇ ಸಾಲಿನ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ಜವಳಿ ಸಂಸ್ಕರಣ ಘಟಕ (ಟೆಕ್ಸ್‌ಟೈಲ್ ಪ್ರೋಸೆಸ್ಸಿಂಗ್ ಘಟಕ) ಸ್ಥಾಪಿಸುವ ಸಲುವಾಗಿ ಯೋಜನಾ ಘಟಕದ ಶೇಕಡ 50 ರಷ್ಟು ಗರಿಷ್ಠ ರೂ. 500.00 ಲಕ್ಷ (ಐದು ನೂರು ಲಕ್ಷ)ಗಳನ್ನು ಸರ್ಕಾರದಿಂದ ಸಹಾಯಧನವಾಗಿ ನೀಡಲು ಆದೇಶಿಸಲಾಗಿದೆ. ಜವಳಿ ಸಂಸ್ಕರಣಾ ಘಟಕ ಸ್ಥಾಪನೆಯ ಯೋಜನೆಯನ್ನು 2016-17ನೇ ಸಾಲಿನ ಆರ್ಥಿಕ ವರ್ಷದಿಂದಲೇ ಜಾರಿಗೆ ಬರುವಂತೆ ಅನುಬಂಧದಲ್ಲಿ ಲಗತ್ತಿಸಿರುವ ಮಾರ್ಗಸೂಚಿಯಂತೆ ಹಾಗೂ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ಇದೊಂದು ಹೊಸ ಕಾಂಪೋನೆಂಟ್ ಆಗಿರುವುದರಿಂದ, ಆಯವ್ಯಯದಲ್ಲಿ ನಿಗದಿಪಡಿಸಿರುವ ಅನುದಾನದ ಮಿತಿಯೊಳಗೆ ಈ ಯೋಜನೆಯ ವೆಚ್ಚವನ್ನು ಭರಿಸುವ ಷರತ್ತಿಗೊಳಪಟ್ಟು ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಮೋದಿಸಲಾಗಿದೆ.

ಈ ಯೋಜನೆಗೆ ತಗಲುವ ವೆಚ್ಚವನ್ನು 2016-17ನೇ ಸಾಲಿನ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯ ಲೆಕ್ಕ ಶೀರ್ಷಿಕೆ: 2851-00-103-0-62 (ಇತರೆ) (ಯೋಜನೆ) ಅಡಿಯಲ್ಲಿ ವೆಚ್ಚಭರಿಸಲು ಅನುಮತಿ ನೀಡಲಾಗಿರುತ್ತದೆ.

ಈ ಯೋಜನೆಯನ್ನು ಜವಳಿ ಅಭಿವೃದ್ಧಿ ಆಯುಕ್ತರ ಪರೀವೀಕ್ಷಣೆ ಮತ್ತು ಸಲಹೆಯೊಂದಿಗೆ ಅನುಬಂಧದಲ್ಲಿ ಲಗತ್ತಿಸಿರುವ ಯೋಜನೆಯ ಮಾರ್ಗ ಸೂಚಿಯಂತೆ ಅನುಷ್ಠಾನಗೊಳಿಸತಕ್ಕದ್ದು. ಈ ಯೋಜನೆಯಡಿ ಸರ್ಕಾರದ ಅನುದಾನ ಕೋರಿ ಸಲ್ಲಿಸುವ ಪ್ರಸ್ತಾವನೆಗಳನ್ನು ಜವಳಿ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ತಾಂತ್ರಿಕ ಪರಿಣಿತರ ಸಮಿತಿಯಲ್ಲಿ ಮಂಡಿಸಿ, ಯೋಜನೆಯ ಸಾಧ್ಯತೆ ಹಾಗೂ ಅರ್ಹತೆಯ ಬಗ್ಗೆ ಪರಿಣಿತರಿಂದ ಪರಿಶೀಲಿಸಿ ದೃಢೀಕರಣದೊಂದಿಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆಗಾಗಿ ಪೂರ್ಣ ಪ್ರಮಾಣದ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: PD 54 FRO 2016 ದಿನಾಂಕ: 04.01.2017. ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 455 ವೆಚ್ಚ-1, 2016 ದಿನಾಂಕ: 21.01.2017. ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ಬೋರಲಿಂಗಯ್ಯ)
ಸರ್ಕಾರದ ಉಪಕಾರ್ಯದರ್ಶಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಪ್ರತಿ:

1. ಮಹಾಲೇಖಪಾಲರು, (ಲೆಕ್ಕ ಪತ್ರ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ-ವೆಚ್ಚ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿ, ಯೋಜನೆ ಕಾರ್ಯಕ್ರಮ ಸಂಯೋಜನೆ ಹಾಗು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ , ಬೆಂಗಳೂರು.
5. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ-1, ವಿಧಾನ ಸೌಧ, ಬೆಂಗಳೂರು.

ಕರ್ನಾಟಕ ಸರ್ಕಾರ

## ಅನುಬಂಧ

**ವಿಷಯ:- ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ಜವಳಿ ಸಂಸ್ಕರಣಾ ಘಟಕ (ಪ್ರೊಸೆಸ್ಸಿಂಗ್ ಘಟಕ) ಸ್ಥಾಪನೆ ಯೋಜನೆಯ ಮಾರ್ಗಸೂಚಿ**

ವಾಕೈ 86 ಜಕೈಯೋ 2016, ದಿನಾಂಕ: 28.01.2017.

* * * * *

ರಾಜ್ಯದಲ್ಲಿ ವಿದ್ಯುತ್‌ಮಗ್ಗ ನೇಕಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಅವರ ವರಮಾನ ಮಟ್ಟವನ್ನು ಹೆಚ್ಚಿಸಲು ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ಪ್ರೊಸೆಸ್ಸಿಂಗ್ ಘಟಕ ಸ್ಥಾಪನೆ ಯೋಜನೆಯೂ ಸಹ ಒಳಗೊಂಡಿರುತ್ತದೆ. ರಾಜ್ಯದಲ್ಲಿ ಪ್ರೊಸೆಸ್ಸಿಂಗ್ ಘಟಕಗಳು ಬಹಳ ಕಡಿಮೆ ಇದ್ದು, ರಾಜ್ಯದ ನೇಕಾರರು ಬಟ್ಟೆ ಸಂಸ್ಕರಣೆಗಾಗಿ (ಪ್ರೋಸೆಸ್ಸಿಂಗ್‌ಗಾಗಿ) ಹೊರ ರಾಜ್ಯವನ್ನು ಅವಲಂಬಿಸಬೇಕಾಗಿರುತ್ತದೆ. ಇದರಿಂದಾಗಿ ಬಟ್ಟೆ ಉತ್ಪಾದನಾ ವೆಚ್ಚವು ಜಾಸ್ತಿಯಾಗಲಿದ್ದು, ಸಮಯವು ಸಹ ವ್ಯರ್ಥವಾಗುತ್ತದೆ. ಇದನ್ನು ಪರಿಶೀಲಿಸಿ ನೇಕಾರರಿಗೆ ಅನುಕೂಲವಾಗುವಂತೆ ಹಾಗೂ ಕಡಿಮೆ ವೆಚ್ಚದಲ್ಲಿ ಪ್ರೊಸೆಸ್ಸಿಂಗ್ ಮಾಡಲಾದ ಬಟ್ಟೆಗಳನ್ನು ಒದಗಿಸಲು ಈ ಯೋಜನೆಯಡಿ ಸರ್ಕಾರದ ವಂತಿಕೆಯನ್ನು ಪ್ರೊಸೆಸ್ಸಿಂಗ್ ಘಟಕ ಸ್ಥಾಪಿಸುವ ಎಸ್.ಪಿ.ವಿ/ಸಂಘ ಸಂಸ್ಥೆಗೆ ನೀಡಲು ಪ್ರಥಮವಾಗಿ ಅವಕಾಶವಿರುತ್ತದೆ.

ರಾಜ್ಯದ ವಿದ್ಯುತ್ ಮಗ್ಗ ನೇಕಾರರಿಗೆ ಉತ್ಪಾದನಾ ಚಟುವಟಿಕೆಗೆ ಹಾಗೂ ಅವರ ಅಭಿವೃದ್ಧಿಗೆ ಕಾಲಬದ್ಧವಾಗಿ ಕಾರ್ಯಕ್ರಮವನ್ನು ಜಾರಿಗೊಳಿಸಲು, ಹಾಗೂ ಯೋಜನೆಯಡಿ ಅನುದಾನ ಬಿಡುಗಡೆ ಮಾಡಲು ಅನುಸರಿಸಬೇಕಾದ ಕಾರ್ಯವಿಧಾನಗಳಿಗೆ ಮಾರ್ಗಸೂಚಿಯನ್ನು ಈ ಕೆಳಗಿನಂತೆ ಹೊರಡಿಸಲಾಗಿದೆ.

**ಅರ್ಹತೆ:**

- ಜವಳಿ ಕೈಗಾರಿಕೋದ್ಯಮಿಗಳು ನೊಂದಾಯಿಸಿದ ಕಂಪನಿ/ಎಸ್.ಪಿ.ವಿ (Special Purpose Vehicle)/ಸಂಘ ಸಂಸ್ಥೆಯ ಮೂಲಕ ಈ ಮುಂದಿನ ಷರತ್ತುಗಳಿಗೊಳಪಟ್ಟು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅರ್ಹತೆಯಿರುತ್ತದೆ.
- ಬಟ್ಟೆ ಸಂಸ್ಕರಣಾ ಘಟಕವನ್ನು (ಪ್ರೊಸೆಸ್ಸಿಂಗ್ ಘಟಕ) ಸ್ಥಾಪಿಸಲು ಉದ್ದೇಶಿಸಿರುವ ಎಸ್.ಪಿ.ವಿ(Special Purpose Vehicle)/ಸಂಘ ಸಂಸ್ಥೆಯಲ್ಲಿ ಕನಿಷ್ಠ 5 ಸದಸ್ಯರನ್ನು ಹೊಂದಿರತಕ್ಕದ್ದು.
- ಬಟ್ಟೆ ಸಂಸ್ಕರಣಾ ಘಟಕವನ್ನು (ಪ್ರೊಸೆಸ್ಸಿಂಗ್ ಘಟಕ) ಸ್ಥಾಪಿಸಲು ಉದ್ದೇಶಿಸಿರುವ ಎಸ್.ಪಿ.ವಿ(Special Purpose Vehicle)/ಸಂಘ ಸಂಸ್ಥೆಯವರ ಹೆಸರಿನಲ್ಲಿ ಕನಿಷ್ಟ 01 ಎಕರೆ ಪ್ರದೇಶವನ್ನು ಹೊಂದಿದ್ದು, ಸಂಸ್ಥೆಯ ಹೆಸರಿನಲ್ಲಿ ನೊಂದಣಿಯಾಗಿರತಕ್ಕದ್ದು.
- ಬಟ್ಟೆ ಸಂಸ್ಕರಣಾ ಘಟಕದ (ಪ್ರೊಸೆಸ್ಸಿಂಗ್ ಘಟಕ) ಸ್ಥಾಪನೆಗೆ ಸರ್ಕಾರದ ಗರಿಷ್ಟ ವಂತಿಕೆ ಯೋಜನಾ ಮೊತ್ತದ ಶೇ.50ರಷ್ಟು (ಗರಿಷ್ಟ ಮಿತಿ ರೂ.500.00 ಲಕ್ಷ) ಹಾಗೂ ಯೋಜನೆ ಅನುಷ್ಠಾನಕ್ಕಾಗಿ ತಗಲುವ ಹೆಚ್ಚುವರಿ ವೆಚ್ಚವನ್ನು ಎಸ್.ಪಿ.ವಿ **(Special Purpose Vehicle)** ಸಂಸ್ಥೆಯು ಭರಿಸತಕ್ಕದ್ದು.

ಬಟ್ಟೆ ಸಂಸ್ಕರಣಾ ಘಟಕವನ್ನು (ಪ್ರೊಸೆಸ್ಸಿಂಗ್ ಘಟಕ) ಸ್ಥಾಪಿಸಲು ಉದ್ದೇಶಿಸಿರುವ ಎಸ್.ಪಿ.ವಿ(Special Purpose Vehicle) /ಸಂಘ ಸಂಸ್ಥೆಯ ಪ್ರವರ್ತಕರು ಜವಳಿ ಉದ್ದಿಮೆಯಲ್ಲಿ ಕನಿಷ್ಠ 03 ವರ್ಷ ಅನುಭವ ಹೊಂದಿರತಕ್ಕದ್ದು.

**ಯೋಜನಾ ಘಟಕಗಳು ಕೆಳಗಿನ ಸೌಲಭ್ಯಗಳನ್ನು ಹೊಂದಿರತಕ್ಕದ್ದು**

- ಪ್ರೊಸೆಸ್ಸಿಂಗ್ ಘಟಕ ಸ್ಥಾಪನೆಗೆ ಗುರುತಿಸಲಾದ ನಿವೇಶನದಲ್ಲಿ ರಸ್ತೆ, ಒಳಚರಂಡಿ, ನೀರು, ವಿದ್ಯುತ್ ಹಾಗೂ ಇತರೆ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ.
- ಪ್ರೊಸೆಸ್ಸಿಂಗ್ ಘಟಕ ಸ್ಥಾಪನೆಗೆ ಅವಶ್ಯವಿರುವ ಕಟ್ಟಡ ನಿರ್ಮಾಣ.
- ತ್ಯಾಜ್ಯ ವಿಲೇವಾರಿ ಘಟಕವನ್ನು ಕಡ್ಡಾಯವಾಗಿ ಸ್ಥಾಪನೆಮಾಡತಕ್ಕದ್ದು.
- ಘಟಕ ಸ್ಥಾಪನೆಗೆ ಸೂಕ್ತವಾದ ಹಾಗೂ ಆಧುನಿಕ ಯಂತ್ರಗಳ ಅಳವಡಿಕೆ.
- ಘಟಕ ಕಾರ್ಯನಿರ್ವಹಣೆಗೆ ಸೂಕ್ತ ತಾಂತ್ರಿಕ ಸಿಬಂದ್ಧಿ ನೇಮಕ.

**ಹಣಕಾಸಿನ ನೆರವು:- ಪ್ರೊಸೆಸ್ಸಿಂಗ್ ಘಟಕದ ಒಟ್ಟು ಯೋಜನಾ (Cost of the Project) ವೆಚ್ಚದ ಮೇಲೆ**

- ಸರ್ಕಾರದ ವಂತಿಕೆ :- ಶೇ.50 ರಷ್ಟು (ಗರಿಷ್ಠ ರೂ.500.00 ಲಕ್ಷ) ನೀಡಲಾಗುವುದು.
- ಬ್ಯಾಂಕಿನ ಸಾಲ :- ಶೇ.35 ರಷ್ಟು ಪಡೆಯತಕ್ಕದ್ದು
- ಸಂಸ್ಥೆಯ ವಂತಿಕೆ :- ಕನಿಷ್ಠ ಶೇ.15 ರಷ್ಟು ಭರಿಸತಕ್ಕದ್ದು.( ಶೇ.50 ರಷ್ಟು ಸಂಸ್ಥೆಯವರೇ ಭರಿಸಲು ಸಾಮರ್ಥ್ಯವಿದ್ದರೆ ಭರಿಸಬಹುದು)

**ಸರ್ಕಾರದಿಂದ ನೀಡುವ ಗರಿಷ್ಠ ಶೇ.50 ರ ಸಹಾಯಧನದ ಘಟಕವಾರು ವೆಚ್ಚ (ಅಂದಾಜು):**

| | (ರೂ.ಲಕ್ಷಗಳಲ್ಲಿ) |
|---|---|
| • ಕಟ್ಟಡ | : 70.00 |
| • ವಿದ್ಯುಧ್ಧೀಕರಣ | : 15.00 |
| • ಯಂತ್ರೋಪಕರಣಗಳು | : 350.00 |
| • ಘನ ತ್ಯಾಜ್ಯ ವಿಲೇವಾರಿ ಘಟಕ | : 30.00 |
| • ಇತರೆ (ಯಂತ್ರೋಪಕರಣಗಳ ಸಲಕರಣೆಗಳು/ಸಾಗಾಣಿಕೆ) | : 35.00 |
| **ಒಟ್ಟು ಯೋಜನಾ ವೆಚ್ಚ** | : **500.00** |

**ಸ್ಪೆಷಲ್ ಪರ್ಪಸ್ ವೆಹಿಕಲ್(ಎಸ್.ಪಿ.ವಿ)ಪಾತ್ರ :**

1. ಯೋಜನೆಯ ಅನುಷ್ಠಾನದ ಸಂಪೂರ್ಣ ಜವಾಬ್ದಾರಿ ಹಾಗೂ ಒ&ಎಮ್ ನಿರ್ವಹಣೆ ಎಸ್.ಪಿ.ವಿ.ಗೆ ಅನ್ವಯಿಸುವುದು.
2. ಯೊಜನೆಯ ಅನುಷ್ಠಾನಕ್ಕೆ ಬೇಕಾದ 01 ಎಕರೆ ಭೂಮಿಯನ್ನು ಹೊಂದಿರುವ ಬಗ್ಗೆ ಸೂಕ್ತ ದಾಖಲಾತಿಗಳನ್ನು ಎಸ್ ಪಿ ವಿ ಸಂಸ್ಥೆಯು ಇಲಾಖೆಗೆ ಒದಗಿಸತಕ್ಕದ್ದು.

5

ಸರ್ಕಾರವು ಯೋಜನೆಗೆ ಆರ್ಥಿಕ ಸಹಾಯ ಒದಗಿಸಿ ಮಂಜೂರಾತಿ ನೀಡಿದ ಕೂಡಲೇ ಎಸ್.ಪಿ.ವಿಯ ಆಡಳಿತ ಮಂಡಳಿಯಲ್ಲಿ ಸರ್ಕಾರದ ಪ್ರತಿನಿಧಿ ಇಬ್ಬರನ್ನು (ವಿಭಾಗದ ಜಂಟಿ ನಿರ್ದೇಶಕರು / ಜಿಲ್ಲೆಯ ಉಪ ನಿರ್ದೇಶಕರು) ನೇಮಿಸಿ ಯೋಜನೆ ಅನುಷ್ಠಾನ ಮಾಡತಕ್ಕದ್ದು.

4. ಯೋಜನೆ ಅನುಷ್ಠಾನದ ಹಂತದಲ್ಲಿ ಎಲ್ಲಾ ಖರೀದಿ / ಕಾಮಗಾರಿ ಇತ್ಯಾದಿಗಳಿಗೆ ಇ-Procurement ಮೂಲಕ ಕೆ.ಟಿ.ಪಿ.ಪಿ ಆಕ್ಟ್‌ನಂತೆ ಕಾರ್ಯನಿರ್ವಹಿಸುವುದು.

**ಯೋಜನೆಯನ್ನು ಕಾರ್ಯಗತಗೊಳಿಸಲು ಹಣ ಬಿಡುಗಡೆ:**

1. ಮೂಲ ಸೌಲಭ್ಯ ಅಭಿವೃದ್ಧಿಪಡಿಸುವ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮಗಳನ್ನು ಪಾಲಿಸತಕ್ಕದ್ದು.
2. ಉದ್ದೇಶಿತ ಪೂರ್ಣ ಯೋಜನೆಯ ಟೆಂಡರ್ ಪ್ರಕ್ರಿಯೆಗೆ ಸರ್ಕಾರದ ಜವಳಿ ಅಭಿವೃದ್ಧಿ ಆಯುಕ್ತರಿಂದ ಅನುಮತಿ ಪಡೆಯತಕ್ಕದ್ದು.
3. ಉದ್ದೇಶಿತ ಕಟ್ಟಡ ನಿರ್ಮಿಸುವಲ್ಲಿ ಕಾಮಗಾರಿಯ ಪ್ರಗತಿಯನ್ನು ಆಧರಿಸಿ 4 ಕಂತುಗಳಲ್ಲಿ ಮೊದಲನೇ ಕಂತು ಶೇ. 25, ಎರಡನೇ ಕಂತು ಶೇ. 25, ಮೂರನೇ ಕಂತು ಶೇ. 25 ಮತ್ತು ನಾಲ್ಕನೇ ಕಂತು ಶೇ. 25 ರಷ್ಟು ಹಣವನ್ನು ಕಟ್ಟಡ ನಿರ್ಮಾಣ ಸಂಸ್ಥೆ / ಏಜೆನ್ಸಿಗೆ ಬಿಡುಗಡೆ ಮಾಡತಕ್ಕದ್ದು.

**ಷರತ್ತು ಮತ್ತು ನಿಭಂದನೆಗಳು**

1. ಸಂಸ್ಕರಣಾ ಘಟಕದ ಯೋಜನೆಯನ್ನು ಆಯ್ಕೆ ಮಾಡುವ ಬಗ್ಗೆ, ಜವಳಿ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ತಾಂತ್ರಿಕ ಸಮಿತಿಯನ್ನು ರಚಿಸಿ ಸದರಿ ಸಮಿತಿಯಲ್ಲಿ ಸಂಸ್ಕರಣಾ ಘಟಕಕ್ಕೆ ಸಂಬಂಧಿಸಿದ ಸವಿಸ್ತಾರ ಯೋಜನಾ ವರದಿ (ಡಿ.ಪಿ.ಆರ್.) ಯನ್ನು ಮಂಡಿಸಿ ಯೋಜನೆಯ ಅರ್ಹತೆ ಹಾಗೂ ಸಾಧ್ಯತೆಯ ಬಗ್ಗೆ ಪರಿಣಿತರಿಂದ ತಾಂತ್ರಿಕವಾಗಿ ಪರಿಶೀಲಿಸಿ, ದೃಢೀಕರಣದೊಂದಿಗೆ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸತಕ್ಕದ್ದು.
2. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರಿಂದ ಯೋಜನೆಗೆ ಅನುಮೋದನೆ ಪಡೆಯತಕ್ಕದ್ದು.
3. ಸರ್ಕಾರದ ವಂತಿಕೆ ಬಿಡುಗಡೆಯಾದ 18 ತಿಂಗಳ ಅವಧಿಯಲ್ಲಿ ಸಂಸ್ಥೆಯವರು ಯೋಜನೆಯನ್ನು ಪೂರ್ಣಗೊಳಿಸತಕ್ಕದ್ದು.
4. ಅನುಷ್ಠಾನಕ್ಕೆ ಅವಶ್ಯಕವಿರುವ ವಿವಿಧ ಇಲಾಖೆಗಳ ಅನುಮತಿಗಳನ್ನು ಪಡೆದು ಎಸ್.ಪಿ.ವಿ. ಸಂಸ್ಥೆಯು ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.
5. ಕಟ್ಟಡ ಕಾಮಗಾರಿಗಳಿಗೆ ಸ್ಥಳೀಯ ಸಂಸ್ಥೆಗಳಿಂದ ನಿಗದಿತ ಅನುಮೋದನೆ ಪಡೆಯತಕ್ಕದ್ದು.
6. ಯೋಜನೆಯ ಅನುಷ್ಠಾನಕ್ಕಾಗಿ ಸರ್ಕಾರದಿಂದ ಮಂಜೂರು ಮಾಡಲಾದ ವಂತಿಕೆಯನ್ನು ಇತರೇ ಉದ್ದೇಶಗಳಿಗೆ ಬಳಸಕೂಡದು.
7. ಅನುಮೋದಿತ ಯೋಜನಾ ವರದಿಯಂತೆಯೇ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.
8. ಯೋಜನಾ ಅನುಷ್ಠಾನದಲ್ಲಿ ಬದಲಾವಣೆಗಳಿದ್ದಲ್ಲಿ ಸರ್ಕಾರದ ಪೂರ್ವಾನುಮತಿ ಪಡೆದು ಅನುಷ್ಠಾನಗೊಳಿಸತಕ್ಕದ್ದು.
9. ಸರ್ಕಾರವು ನಿಗದಿಪಡಿಸುವ ನಮೂನೆಯಲ್ಲಿ ಷರತ್ತು ಮತ್ತು ನಿಬಂಧನೆಗಳ ಬಾಂಡ್‌ನ್ನು ನೀಡತಕ್ಕದ್ದು.
10. ತ್ಯಾಜ್ಯ ವಸ್ತು ನಿರ್ವಹಣೆಯನ್ನು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಸೂಚನೆಯಂತೆ ನಿರ್ವಹಿಸತಕ್ಕದ್ದು.

11. ನಿವೇಶನ ಅಭಿವೃದ್ಧಿ, ಕಟ್ಟಡ ನಿರ್ಮಾಣ, ಯಂತ್ರೋಪಕರಣ ಹಾಗೂ ಇತರೆ ಸಾಮಗ್ರಿಗಳ ಖರೀದಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ(KTPP Act)ದಡಿ ಇ-**Procurement** ಪದ್ಧತಿಯನ್ನು ಅನುಸರಿಸುವುದು ಹಾಗೂ ಟೆಂಡರ್‌ಗಳಿಗೆ ಕೇಂದ್ರ ಕಛೇರಿಯ ತಾಂತ್ರಿಕ ಸಮಿತಿಯಿಂದ ಅನುಮೋದನೆ ಪಡೆಯುವುದು.
12. ಯೋಜನಾ ಅನುಷ್ಠಾನದ ಪ್ರತಿ ಹಂತದ ಆರ್ಥಿಕ ಹಾಗೂ ಭೌತಿಕ ಪ್ರಗತಿ ವರದಿಯನ್ನು ಜಿಲ್ಲಾ ಮಟ್ಟದ ಅಧಿಕಾರಿಗಳು ಪರಿಶೀಲಿಸಿ ಪ್ರತಿ ಮಾಹೆಯ 5ನೇ ತಾರೀಖಿನೊಳಗಾಗಿ ಕೇಂದ್ರ ಕಛೇರಿಗೆ ಸಲ್ಲಿಸುವುದು.
13. ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪ್ರಗತಿಯನ್ನು ಪರಿಗಣಿಸಿ ಎಸ್.ಪಿ.ವಿ. ಸಂಸ್ಥೆಯು ವೆಚ್ಚ ಭರಿಸಿದ ನಂತರ ಸರ್ಕಾರದ ಅನುದಾನ ಮತ್ತು ಬ್ಯಾಂಕ್ ಸಾಲ ಅನುಪಾತದ (ಪ್ರೋರೆಟಾ) ಆಧಾರದ ಮೇಲೆ ಹಂತ ಹಂತವಾಗಿ ಹಣವನ್ನು ಬಿಡುಗಡೆ ಮಾಡುವುದು.
14. ಯಂತ್ರೋಪಕರಣಗಳ ಖರೀದಿ ಹಾಗೂ ಅಳವಡಿಕೆ ಸಂಬಂಧಿಸಿದಂತೆ ಹಂತ ಹಂತವಾಗಿ ಹಣ ಬಿಡುಗಡೆ ಮಾಡುವುದು.
15. ಈ ಯೋಜನೆ ಅಡಿಯಲ್ಲಿ ನಿರ್ಮಿಸುವ ಕಟ್ಟಡ ಹಾಗೂ ಯಂತ್ರೋಪಕರಣ ಮತ್ತು ನಿವೇಶನದ ಪ್ರಥಮ ಹಕ್ಕು ಕೈಮಗ್ಗ ಮತ್ತು ಜವಳಿ ಇಲಾಖೆಯಾಗಿದ್ದು, ಎರಡನೇ ಹಕ್ಕು ಸಾಲ ಮಂಜೂರಾತಿ ನೀಡುವ ಹಣಕಾಸು ಸಂಸ್ಥೆಯದಾಗಿರುತ್ತದೆ. ಎಸ್.ಪಿ.ವಿ ರವರು ಪ್ರಥಮ ಹಕ್ಕು (**First Charge**) ಪತ್ರವನ್ನು ಕೈಮಗ್ಗ ಮತ್ತು ಜವಳಿ ಇಲಾಖೆಗೆ ಸಲ್ಲಿಸತಕ್ಕದ್ದು.
16. ಕರ್ನಾಟಕ ರಾಜ್ಯದ ನಿಗಮ/ಮಂಡಳಿ/ಸಂಘ ಸಂಸ್ಥೆಗಳ ಗ್ರೇ ಬಟ್ಟೆ ಪ್ರೊಸೆಸ್ಸಿಂಗ್ ಕಾರ್ಯವನ್ನು ನಿರ್ವಹಿಸಲು ಪ್ರಥಮ ಆದ್ಯತೆ ನೀಡಿ ರಿಯಾಯಿತಿ ದರದಲ್ಲಿ ಸಂಸ್ಕರಣಾ ಶುಲ್ಕವನ್ನು ವಿಧಿಸತಕ್ಕದ್ದು.
17. ಎಸ್.ಪಿ.ವಿ ಕಂಪೆನಿಯ ಪ್ರತಿ Board of Directors ಸಭೆಯನ್ನು ಇಲಾಖೆಯ ಅಧಿಕಾರಿಗಳ ಹಾಜರಾತಿಯಲ್ಲಿ ನಡೆಸತಕ್ಕದ್ದು.
18. ಘಟಕ ವೆಚ್ಚಕ್ಕಿಂತ ಹೆಚ್ಚುವರಿಯಾದ ಅಂದಾಜು ಮೊತ್ತವನ್ನು ಭರಿಸಲು ನಿಗಮ / ಮಹಾ ಮಂಡಳ / ಎಸ್.ಪಿ.ವಿ. ಸಂಸ್ಥೆಯ ಆಡಳಿತ ಮಂಡಳಿ ಠರಾವಿನೊಂದಿಗೆ ಖಾತ್ರಿ ನೀಡತಕ್ಕದ್ದು.
19. ಕಟ್ಟಡ ಕಾಮಗಾರಿಯ ಪ್ರಗತಿಯನ್ನು ಆಧರಿಸಿ ಹಂತ ಹಂತವಾಗಿ ಹಣ ಬಿಡುಗಡೆ ಮಾಡುವುದು ಹಾಗೂ ದಾಖಲೆಯಾಗಿ ಫೋಟೋ ಪ್ರತಿ ಪಡೆದು ಇಡತಕ್ಕದ್ದು.
20. ಕಟ್ಟಡ ಕಾಮಗಾರಿ ಪೂರ್ಣಗೊಂಡ ನಂತರ ಅಧಿಕೃತ ರಿಜಿಸ್ಟರ್ಡ್ ಇಂಜಿನಿಯರ್‌ರವರಿಂದ ಕಂಪ್ಲೀಷನ್ ಸರ್ಟಿಫಿಕೇಟ್ ಪಡೆದು ದೃಢೀಕರಿಸುವುದು.
21. ಕಟ್ಟಡದ ಮೇಲೆ **"ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ______ ಸಾಲಿನಲ್ಲಿ ನಿರ್ಮಿಸಲಾದ ಜವಳಿ ಸಂಸ್ಕರಣಾ ಘಟಕ"** ಎಂದು ನಾಮಫಲ ಬರೆಸತಕ್ಕದ್ದು.
22. ಸರ್ಕಾರದ ಅನುಮತಿ ಇಲ್ಲದೆ ಈ ಯೋಜನೆಯಡಿ ನಿರ್ಮಿಸಿದ ಆಸ್ತಿಯನ್ನು ಪರಭಾರೆ ಅಥವಾ ವರ್ಗಾವಣೆ ಮಾಡತಕ್ಕದ್ದಲ್ಲ.

(ಕೆ. ಬೋರಲಿಂಗಯ್ಯ)
ಸರ್ಕಾರದ ಉಪ ಕಾರ್ಯದರ್ಶಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.